ಅ) ಪುತ್ತೂರು–ಸುಳ್ಯ–ಬಂಟ್ವಾಳ ತಾಲ್ಲೂಕುಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ದೋಷ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಂಟ್ವಾಳ ತಾಲ್ಲೂಕು ಇಡ್ಡಿಡು ಗ್ರಾಮದಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಮುಕ್ತಾಯಗೊಳಿಸಲಾಗುವುದು (ವಿವರ ನೀಡುವುದು)

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ಬಂದಿದೆ.

ಆ) ಬಂಟ್ವಾಳ ತಾಲ್ಲೂಕಿನ ಇಡ್ಡಿಡು ಗ್ರಾಮದಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಪ್ರಸ್ತಾವನೆ ಇರುವುದಿಲ್ಲ. ಆದರೆ ಪುತ್ತೂರು, ಬಂಟ್ವಾಳ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಪುತ್ತೂರು ಬಳಿಯ ನೆಟ್ಲ ಮುದನೂರಿನಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಇ) ಪುತ್ತೂರು ಬಳಿಯ ನೆಟ್ಲ ಮುದನೂರಿನಲ್ಲಿ 220 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಸದರಿ ಕಾಮಗಾರಿ ಪ್ರಗತಿಯಲ್ಲಿದೆ. ಏಪ್ರಿಲ್ 2005ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿಯನ್ನು ಗುತ್ತಿಗೆದಾರರಿಗೆ ನಿಗದಿಪಡಿಸಲಾಗಿದೆ.

ಕಾಮಗಾರಿಯ ವಿವರಗಳು:–

1)	ಕಾಮಗಾರಿಯ ಹೆಸರು	ಪುತ್ತೂರು ತಾಲ್ಲೂಕಿನ ನೆಟ್ಲಮುದನೂರಿನಲ್ಲಿ 2X100 ಎಂ.ವಿ.ಎ. 220/110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆ.
2)	ಕಾಮಗಾರಿಯ ಅಂದಾಜು ವೆಚ್ಚ	ರೂ.4060 ಲಕ್ಷಗಳು
3)	ಕಾಮಗಾರಿಯ ಗುತ್ತಿಗೆದಾರರ ಹೆಸರು	ಮೆ.ಎ.ಬಿ.ಬಿ.
4)	ಗುತ್ತಿಗೆ ಕರಾರಿನ ಪ್ರಕಾರ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುವ ದಿನಾಂಕ	16–04–2005

828(1467): ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೂತನ ತಾಲ್ಲೂಕುಗಳ ರಚನೆಗೆ ಸರ್ಕಾರ ಕ್ರಮ ಜರುಗಿಸುತ್ತಿದೆಯೇ, ಹೌದಾದಲ್ಲಿ, ಅದರ ವಿವರಗಳೇನು;

ಆ) ನೂತನ ತಾಲ್ಲೂಕುಗಳ ರಚನೆಗೆ ಯಾವ ಯಾವ ಮಾನದಂಡಗಳನ್ನು ಅನುಸರಿಸಲು ಸರ್ಕಾರ ನಿರ್ಧರಿಸಿದೆ;

ಇ) ತಾಲ್ಲೂಕು ರಚನೆಯ ಸಂಬಂಧವಾಗಿ ಜಸ್ಟೀಸ್ ಕುಲದೀಪ್‌ಸಿಂಗ್ ಸಮಿತಿ ನೀಡಿರುವ ವರದಿಯ ಪ್ರಮುಖ ಅಂಶಗಳೇನು;

ಈ) ಬಹಳ ವರ್ಷಗಳಿಂದಲೂ ಇದು ಪ್ರಕ್ರಿಯೆ ಹಂತದಲ್ಲಿದ್ದು ನೂತನ ತಾಲ್ಲೂಕು ರಚನೆಯ ನಿರ್ಧಾರದ ವಿಳಂಬಕ್ಕೆ ಕಾರಣಗಳೇನು; ಒಟ್ಟು ಎಷ್ಟು ಹೊಸ ತಾಲ್ಲೂಕುಗಳನ್ನು ಮತ್ತು ಎಂದು ರಚಿಸಿ ಘೋಷಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ

ಆ) ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವಾಗ ಆಡಳಿತಾತ್ಮಕ ಅನುಕೂಲತೆ, ಸಾರ್ವಜನಿಕ ಹಿತಾಸಕ್ತಿ, ಕಾನೂನು ಮತ್ತು ಸುವ್ಯವಸ್ಥೆ ಆ ಪ್ರದೇಶದ ಸಾಮಾಜಿಕ ಹಾಗೂ ಕೈಗಾರಿಕಾ ಅಭಿವೃದ್ಧಿ ಇತ್ಯಾದಿ ಅಂಶಗಳನ್ನು ಮಾನದಂಡಗಳೆಂದು ನಿರ್ಧರಿಸಬೇಕಾಗುತ್ತದೆ.

ಇ) ತಾಲ್ಲೂಕು ರಚನೆ ಸಂಬಂಧವಾಗಿ ಸರ್ಕಾರವು ಜಸ್ಟೀಸ್ ಕುಲದೀಪ್‌ಸಿಂಗ್ ಸಮಿತಿ ರಚಿಸಿರುವುದಿಲ್ಲ.

ಈ) ಈಗ ಕೇಂದ್ರ ಸರ್ಕಾರವು ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣಾ ಕಾರ್ಯವು ಪೂರ್ಣಗೊಳ್ಳುವವರೆಗೆ ಆಡಳಿತಾತ್ಮಕ ಘಟಕಗಳ ಸ್ಥಾನ ಎಲ್ಲೆಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ಹೊಸ ತಾಲ್ಲೂಕುಗಳ ರಚನೆಯ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಿರುವುದಿಲ್ಲ.

829(984) ಶ್ರೀ ಸಂಗಮೇಶ್ವರ ಬಿ. ಕೆ. (ಭದ್ರಾವತಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಜಲಾಶಯದ (ಡ್ಯಾಂ) ಪ್ರದೇಶದಲ್ಲಿ KRS ಮಾದರಿಯಲ್ಲಿ ಉದ್ಯಾನವನ ಸಂಗೀತ ಕಾರಂಜಿಯನ್ನು ನಿರ್ಮಾಣ ಮಾಡಿ ಪ್ರವಾಸೋದ್ಯಮ ಕೇಂದ್ರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಪುರಾತನ ಶ್ರೀಲಕ್ಷ್ಮೀನರಸಿಂಹ ದೇವಾಲಯವಿರುವ ಭದ್ರಾವತಿಯನ್ನು ಪ್ರವಾಸಿ ಕೇಂದ್ರವಾಗಿರಿಸಿ, ಭದ್ರಾ ಅಭಯಾರಣ್ಯ, ಶೃಂಗೇರಿ, ಹೊರನಾಡು, ಕೆಮ್ಮಣ್ಣು ಗುಂಡಿ, ಅಮೃತಾಪುರ, ಷಹಾಜಿರಾವ್ ಬೋಸ್ಲೆಯವರ ಸಮಾಧಿ (ಚನ್ನಗಿರಿ ತಾಲ್ಲೂಕು) ಸೊಳೇಕೆರೆ (ಶಾಂತಿಸಾಗರ) ಇವುಗಳನ್ನು ಸಂದರ್ಶಿಸುವ ಪ್ಯಾಕೇಜ್ ಪ್ರವಾಸ ಪ್ರಾರಂಭಿಸಲಾಗುವುದೇ;

ಇ) ಹಾಗಿದ್ದಲ್ಲಿ, ಶಿವಮೊಗ್ಗ ಜಿಲ್ಲಾ ಪ್ರವಾಸೋದ್ಯಮ ಇಲಾಖೆ (ಜಿಲ್ಲಾಧಿಕಾರಿಗಳು ಶಿವಮೊಗ್ಗ) ಯವರು ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸಿರುತ್ತಾರೆಯೆ (ವಿವರ ನೀಡುವುದು)?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಇಲ್ಲ,

ಆ) ಪ್ರವಾಸಿಗರ ಸಂಖ್ಯೆಯನ್ನು ಆದರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ.